ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | | 59 |
| ಮಾನ್ಯ ಸದಸ್ಯರ ಹೆಸರು | | ಶ್ರೀ ಕೆ. ಅಬ್ದುಲ್ ಜಬ್ಬಾರ್ |
| ಉತ್ತರಿಸುವ ಸಚಿವರು | | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | | 13-12-2018 |
| ಪ್ರಶ್ನೆ | | ಉತ್ತರ |
| (ಅ) | ಕಳೆದ ಒಂದು ವರ್ಷದಲ್ಲಿ ರಾಜ್ಯದಲ್ಲಿ ದಾಖಲಾದ ನಕಲಿ ಅಂಕಪಟ್ಟಿ ದಂಧೆಯ ಪ್ರಕರಣಗಳ ಸಂಖ್ಯೆ ಎಷ್ಟು; ಸದರಿ ಪ್ರಕರಣಗಳಲ್ಲಿ ಸಾಬೀತಾದ ಪ್ರಕರಣಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು); | ಕಳೆದ ಒಂದು ವರ್ಷದಲ್ಲಿ ದಾಖಲಾದ ಒಟ್ಟು ನಕಲಿ ಅಂಕಪಟ್ಟಿ ಪ್ರಕರಣಗಳ ಸಂಖ್ಯೆ: 2495<br>ಈ ಪೈಕಿ 09 ಪ್ರಕರಣಗಳು ನಕಲಿ ಅಂಕಪಟ್ಟಿ ಪ್ರಕರಣಗಳೆಂದು ಸಾಬೀತಾಗಿರುತ್ತವೆ. |
| (ಆ) | ಈ ಆರೋಪಿಗಳಿಂದ ಯಾವ ಯಾವ ವಿಶ್ವವಿದ್ಯಾಲಯದ ಅಧಿಕ ನಕಲಿ ಅಂಕಪಟ್ಟಿಗಳನ್ನು ವಶಪಡಿಸಿಕೊಳ್ಳಲಾಗಿದೆ; (ವಿವರ ನೀಡುವುದು) | ಮೇಲ್ಕಂಡ 2495 ನಕಲಿ ಅಂಕಪಟ್ಟಿ ಪ್ರಕರಣಗಳು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ್ದು, ಸದರಿ ಅಂಕಪಟ್ಟಿಗಳನ್ನು ವಶಪಡಿಸಿಕೊಂಡು ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ (ವಿವರಗಳನ್ನು **ಅನುಬಂಧ-ಅ** ರಲ್ಲಿ ಒದಗಿಸಿದೆ) ಹಾಗೂ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ಉಳಿದ 18 ವಿಶ್ವವಿದ್ಯಾಲಯಗಳಲ್ಲಿ ಕಳೆದ ಒಂದು ವರ್ಷದಲ್ಲಿ ನಕಲಿ ಅಂಕಪಟ್ಟಿ ಪ್ರಕರಣಗಳು ದಾಖಲಾಗಿರುವುದಿಲ್ಲ. |
| (ಇ) | ನಕಲಿ ಅಂಕಪಟ್ಟಿ ಜಾಲ ತಡೆಯಲು ಸರ್ಕಾರ ತೆಗೆದುಕೊಂಡ ಕಠಿಣ ಕ್ರಮಗಳೇನು? | ಅಂಕಪಟ್ಟಿಗಳನ್ನು ಕೃತ್ರಿಮಾಗೊಳಿಸಲು ಸಾಧ್ಯವಾಗದಂತೆ ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಭದ್ರತಾ ವೈಶಿಷ್ಟಗಳನ್ನು ಎಲ್ಲಾ ವಿಶ್ವವಿದ್ಯಾಲಯಗಳಿಂದ ಅಂಕಪಟ್ಟಿಗಳಲ್ಲಿ ಅಳವಡಿಸಲಾಗಿದೆ.<br>ಬಹುಮುಖ್ಯವಾಗಿ, ಎಲ್ಲಾ ವಿಶ್ವವಿದ್ಯಾಲಯಗಳ ಶೈಕ್ಷಣಿಕ ದಾಖಲೆಗಳನ್ನು ನ್ಯಾಡ್ (National Academic Depository)ನಲ್ಲಿ ದಾಖಲಿಸಲು ಸರ್ಕಾರದಿಂದ ನಿರ್ದೇಶನ ನೀಡಲಾಗಿದೆ. |

ಸಂಖ್ಯೆ: ಇಡಿ 415 ಯುಎನ್ಇ 2018

(ಜಿ.ಟಿ.ದೇವೇಗೌಡ)
ಉನ್ನತ ಶಿಕ್ಷಣ ಸಚಿವರು.

ಅನುಬಂಧ - 6 ~~ಅನುಬಂಧ~~ - 'ಬ'

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತ ಗಂಗೋತ್ರಿ, ಮೈಸೂರು-06

ಸಂಖ್ಯೆ: ಕರಾಮುವಿ/ಪಪಿ/ಸಿಬ್ಬಂದಿ-01/ಕ.ವಿ.ಪ್ರ/2015-16 ದಿನಾಂಕ: 06.12.2018

ಗೆ,

ಕುಲಸಚಿವರು,

ಕರಾಮುವಿ,

ಮೈಸೂರು.

ಮಾನ್ಯರೆ,

ವಿಷಯ: ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಕೆ ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿರುವವರು) ಇವರು ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 599ರ ಪ್ರಶ್ನೆಗೆ ಕರಡು ಉತ್ತರವನ್ನು ಸಲ್ಲಿಸುತ್ತಿರುವ ಬಗ್ಗೆ.

ಉಲ್ಲೇಖ: ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಪತ್ರ ಸಂಖ್ಯೆ:ಎಲ್‌ಸಿಕ್ಯೂ599:13ನೇಅ:2018

ಮೇಲ್ಕಂಡ ವಿಷಯಕ್ಕೆ ಹಾಗು ಉಲ್ಲೇಖಿತ ಪತ್ರದನ್ವಯ, ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ: ಕೆ ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿರುವವರು) ಇವರು ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 599ರ ಪ್ರಶ್ನೆಗೆ ಕರಡು ಉತ್ತರವನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| 01 | ಕಳೆದ ಒಂದು ವರ್ಷದಲ್ಲಿ ರಾಜ್ಯದಲ್ಲಿ ದಾಖಲಾದ ನಕಲಿ ಅಂಕಪಟ್ಟಿ ದಂಧೆಯ ಪ್ರಕರಣಗಳ ಸಂಖ್ಯೆ ಎಷ್ಟು; ಸದರಿ ಪ್ರಕರಣಗಳಲ್ಲಿ ಸಾಬೀತಾದ ಪ್ರಕರಣಗಳೆಷ್ಟು; (ಜಿಲ್ಲಾವಾರು ನೀಡುವುದು) | 1. ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗಕ್ಕೆ ವಿದ್ಯಾರ್ಥಿಗಳಿಂದ ಅಂಕಪಟ್ಟಿ ಹಾಗು ಪ್ರಮಾಣ ಪತ್ರಗಳ ನೈಜತೆಗಾಗಿ ಇಲಾಖೆಗಳಿಂದ ಮತ್ತು ಸ್ವತಃ ವಿದ್ಯಾರ್ಥಿಗಳೇ ಅರ್ಜಿ ಮುಖೇನ ಕೋರಿರುತ್ತಾರೆ. ಅದರ ಪೈಕಿ ಕೆಲವು ವಿದ್ಯಾರ್ಥಿಗಳ ಅಂಕಪಟ್ಟಿ ಮತ್ತು ಇತರೆ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ಒಳಪಡಿಸಿದ್ದ ಸಂದರ್ಭದಲ್ಲಿ ವಿಭಾಗದಲ್ಲಿ ಲಭ್ಯವಿರುವ ಮಾಹಿತಿ ಹಾಗು ದಾಖಲೆಗಳನುಸಾರ ನಕಲಿ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳು ಎಂದು ತಿಳಿದು ಬಂದಿರುತ್ತದೆ.<br>2. ಈ ಸಂಬಂಧ ನಕಲಿ ಅಂಕಪಟ್ಟಿ ಹೊಂದಿರುವ ವಿದ್ಯಾರ್ಥಿಗಳು ಖುದ್ದಾಗಿ ವಿಶ್ವವಿದ್ಯಾನಿಲಯಕ್ಕೆ ಹಾಜರಾಗಿರುವ ವಿರುದ್ಧ ಸ್ಥಳೀಯ ಠಾಣೆಯ ಜಯಲಕ್ಷ್ಮೀಪುರಂ ಪೊಲೀಸ್ ಠಾಣೆ ಇವರಿಗೆ ಅಂಕಪಟ್ಟಿಗಳನ್ನು ಹೊಂದಿರುವ ವಿದ್ಯಾರ್ಥಿಗಳ ವಿರುದ್ಧ ದೂರುಗಳನ್ನು ದಾಖಲು ಮಾಡಲಾಗಿದೆ.<br>3. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹೆಸರಿನಲ್ಲಿ ನಕಲಿ ಅಂಕಪಟ್ಟಿ ಸೃಷ್ಟಿಸಿ ಮಾರಾಟ ಮಾಡುತ್ತಿದ್ದ ಆರೋಪಿಗಳನ್ನು ಮೈಸೂರಿನ ನಜರ್‌ಬಾದ್ ಸಿಸಿಬಿ ಪೊಲೀಸ್‌ರು 990 ಅಂಕಪಟ್ಟಿಗಳನ್ನು ವಶಪಡಿಸಿಕೊಂಡು ಸ್ವಯಂ ತನಿಖೆ ನಡೆಸುತ್ತಿದ್ದಾರೆ ಮತ್ತು ಸಹಾಯಕ ಪೊಲೀಸ್ ಆಯುಕ್ತರು, ಸಿಸಿಬಿ ಎಫ್ & ಎಂ, ಎನ್‌ಟಿ ಪೇಟೆ, ಬೆಂಗಳೂರು ಪೊಲೀಸ್ ಇವರು 97 ಅಂಕಪಟ್ಟಿಗಳನ್ನು ಹಾಗೂ ಸಹಾಯಕ ಪೊಲೀಸ್ ಕಮಿಷನರ್‌ರವರ ಕಛೇರಿ ಸಿಸಿಬಿ ಬೆಂಗಳೂರು ನಗರ 517 ಅಂಕಪಟ್ಟಿಗಳನ್ನು ವಶಪಡಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಪರಿಶೀಲನೆಗಾಗಿ ಸಲ್ಲಿಸಿದ್ದು, ಅಂಕಪಟ್ಟಿಗಳ ಪರಿಶೀಲನೆ ಕಾರ್ಯ ನಡೆಯುತ್ತಿರುತ್ತದೆ.<br>ಈ ಕೆಳಕಂಡ ಠಾಣೆಯ ಪೊಲೀಸರು ದಸ್ತಗಿರಿ ಮಾಡಿ ಅಂಕಪಟ್ಟಿಗಳನ್ನು ವಶಪಡಿಸಿಕೊಂಡು ಪರಿಶೀಲನೆಗಾಗಿ |

| | | |
|---|---|---|
| | | ಸಲ್ಲಿಸಿರುತ್ತಾರೆ ವಿವರ ಕೆಳಕಂಡಂತಿದೆ.<br>1. ಮಲ್ಲೇಶ್ವರಂ, ಬೆಂಗಳೂರು ಇವರು ಬೆಂಗಳೂರು 19 ಅಂಕಪಟ್ಟಿಗಳು<br>2. ಹೊಸಪೇಟೆ, ಬಳ್ಳಾರಿ 745 ಅಂಕಪಟ್ಟಿಗಳು<br>3. ಬಸವಪಟ್ಟಣ, ದಾವಣಗೆರೆ 1 ಅಂಕಪಟ್ಟಿ<br>4. ಜಯಲಕ್ಷ್ಮಿಪುರಂ, ಮೈಸೂರು 95 ಅಂಕಪಟ್ಟಿಗಳು<br>5. ಕೊಲ್ಕತ್ತ, ಪಶ್ಚಿಮ ಬಂಗಾಳ 1 ಅಂಕಪಟ್ಟಿ<br>6. ಕೊತ್ವಾಲ್ ನಗರ, ಉತ್ತರ ಪ್ರದೇಶ 22 ಅಂಕಪಟ್ಟಿಗಳು<br>ಅಲ್ಲದೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು ಇವರು ಪರಿಶೀಲನೆಗೆ ಸಲ್ಲಿಸಿದ್ದ 09 ವಿದ್ಯಾರ್ಥಿಗಳ ಅಂಕಪಟ್ಟಿಗಳಲ್ಲಿ 06 ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಅಂಕಪಟ್ಟಿಗಳು ಮತ್ತು ಪ್ರಮಾಣ ಪತ್ರಗಳು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಪರಿಶೀಲನೆಗೆ ಸಲ್ಲಿಸಿದ್ದ ಬೂಸಪ್ಪ ಖೇಣಿ ವಿದ್ಯಾರ್ಥಿಗೆ ಸಂಬಂಧಿಸಿದ 8 ಅಂಕಪಟ್ಟಿಗಳು 2 ಪ್ರಮಾಣ ಪತ್ರಗಳು ನಕಲಿ ಅಂಕಪಟ್ಟಿಗಳಾಗಿರುತ್ತದೆ. ಶ್ರೀ ಅಕ್ಷಯ್ ಕುಮಾರ್, ಪಂಜಾಬ್, ಬಿಬಿಎ ಪದವಿ ಪ್ರಮಾಣ ಪತ್ರ ಹಾಗೂ ಮೂಲ ಅಂಕಪಟ್ಟಿಗಳ ನೈಜತೆ ಸಂಬಂಧ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದ ಸಂದರ್ಭದಲ್ಲಿ ನಕಲಿ ಎಂದು ಕಂಡುಬಂದಿರುತ್ತದೆ ಈ ಹಿನ್ನೆಲೆಯಲ್ಲಿ ಮೇಲಿನ ಪ್ರಕರಣಗಳಿಗೆ ಸಂಬಂಧಿಸಿದಂತೆ ಮೈಸೂರಿನ ಸ್ಥಳೀಯ ಜಯಲಕ್ಷ್ಮೀಪುರಂ ಪೋಲೀಸ್ ಠಾಣೆಯಲ್ಲಿ ದೂರು ದಾಖಲಾಗಿಸಲಾಗಿದ್ದು ವಿಚಾರಣೆ ಹಂತದಲ್ಲಿದೆ.<br>ಮುಂದುವರೆದಂತೆ ವಿಶ್ವವಿದ್ಯಾನಿಲಯದೊಂದಿಗೆ ಒಡಂಬಡಿಕೆ ಮಾಡಿಕೊಂಡು ಪರೀಕ್ಷಾ ರಹಸ್ಯ ಕಾರ್ಯಗಳನ್ನು ಕರಾಮುವಿ ನಿಲಯದಲ್ಲಿ ನಿರ್ವಹಿಸುತ್ತಿದ್ದ ಇಂಡಿಯನ್ ಇನ್ಸಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಮುಂಬೈನ ವ್ಯವಸ್ಥಾಪಕರೊಂದಿಗೆ ನಕಲಿ ಅಂಕಪಟ್ಟಿ ಜಾಲದಲ್ಲಿ ತೊಡಗಿದ್ದ 05 ಮಂದಿ ತಾತ್ಕಾಲಿಕ ನೌಕರರುಗಳನ್ನು ಕೆಲಸದಿಂದ ವಜಾಮಾಡಲಾಗಿರುತ್ತದೆ ಹಾಗೂ ಖಾಯಂ ನೌಕರರಾದ ಒಬ್ಬರು ಸಹಾಯಕ ಕುಲಸಚಿವರವರನ್ನು ಅಮಾನತ್ತುಗೊಳಿಸಲಾಗಿದೆ.<br>ಮೇಲಿನ ಪ್ರಕರಣಗಳಲ್ಲದೆ ಪ್ರತಿದಿನ ಪರಿಶೀಲನೆಗಾಗಿ ಸಲ್ಲಿಸುತ್ತಿರುವ ಅಂಕಪಟ್ಟಿಗಳಲ್ಲಿ ನಕಲಿ ಅಂಕಪಟ್ಟಿಗಳೆಂದು ಕಂಡು ಬಂದಲ್ಲಿ ಅಂತಹವರ ವಿರುದ್ಧವು ಮೊಕದ್ದಮೆಯನ್ನು ದಾಖಲು ಮಾಡಲಾಗುತ್ತಿದೆ. |
| 02 | ಈ ಆರೋಪಿಗಳಿಂದ ಯಾವ ಯಾವ ವಿಶ್ವವಿದ್ಯಾನಿಲಯದ ಅಂಥ ನಕಲಿ ಅಂಕಪಟ್ಟಿಗಳನ್ನು ವಶಪಡಿಸಿಕೊಳ್ಳಲಾಗಿದೆ.<br>(ವಿವರ ನೀಡುವುದು) | 1. ಸರ್ಕಾರ ಮಟ್ಟದಲ್ಲಿಯೇ ಉತ್ತರಿಸಬೇಕು<br>2. ವಿಶ್ವವಿದ್ಯಾನಿಲಯಕ್ಕೆ ಬರುವ ಅರ್ಜಿಗಳಲ್ಲಿ ನಕಲಿ ಅಂಕಪಟ್ಟಿ ಹಾಗು ಪ್ರಮಾಣ ಪತ್ರಗಳನ್ನು ಹೊಂದಿರುವ ವಿದ್ಯಾರ್ಥಿಗಳ ವಿರುದ್ಧ ದೂರು ದಾಖಲು ಮಾಡಲಾಗಿದೆ. ಮುಂದುವರೆದು, ಇದರ ಬಗ್ಗೆ ಪೋಲೀಸ್ ಇಲಾಖೆಯವರು ತೆಗೆದುಕೊಂಡ ಕ್ರಮವನ್ನು ಸಲ್ಲಿಸಿರುವುದಿಲ್ಲ. |
| 03 | ನಕಲಿ ಅಂಕಪಟ್ಟಿ ಜಾಲ ತಡೆಯಲು ಸರ್ಕಾರ ತೆಗೆದುಕೊಂಡ ಕಠಿಣ ಕ್ರಮಗಳೇನು? | ಸರ್ಕಾರ ಮಟ್ಟದಲ್ಲಿಯೇ ಉತ್ತರಿಸಬೇಕು. |

ವಂದನೆಗಳೊಂದಿಗೆ,

ತಮ್ಮ ನಂಬುಗೆಯ,

(ಸಹಿ) 06/12/18

ಕುಲಸಚಿವ (ಪರೀಕ್ಷಾಂಗ)